


بسم اللہِ الرّحمٰن الرّحیم

# ಖುತ್‌ಬ ಈದುಲ್ ಫಿತ್ರ್ – 2025

## ರಮಝಾನಿನ ಒಳಿತುಗಳನ್ನು ಮುಂದುವರಿಸಿಕೊಂಡು ಹೋಗುವುದೇ ನಿಜವಾದ ಈದ್

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **31-03-2025** ರಂದು ನೀಡಿದ ಈದ್‌ಲ್ ಫಿತ್ರ್ **ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:)*

ನಿನ್ನೆ ರಮಝಾನ್ ಮುಕ್ತಾಯಗೊಂಡಿತು ಮತ್ತು ಇಂದು ನಾವು ಅಲ್ಲಾಹನ ಕೃಪೆಯಿಂದ ಈದುಲ್ ಫಿತ್ರ್ ಆಚರಿಸುತ್ತಿದ್ದೇವೆ. ರಮಝಾನಿನಲ್ಲಿ ನಾವು ಮಾಡಿದ ಒಳಿತುಗಳಿಗಾಗಿ ಹಾಗೂ ಒಳಿತುಗಳನ್ನು ಮಾಡಲು ವಾಗ್ದಾನ ಮಾಡಿದ್ದಕ್ಕಾಗಿ ನಾವು ಇಂದು ಸಂತೋಷದ ದಿನವನ್ನು ಆಚರಿಸುತ್ತಿದ್ದೇವೆ. ಆದ್ದರಿಂದ ಈ ಈದ್ ಹಬ್ಬ ಕೇವಲ ಸಂತೋಷಪಡುವ ದಿನವಲ್ಲ, ಬದಲಾಗಿ ಈಗ ನಾವು ಈ ಎಲ್ಲ ಒಳಿತುಗಳನ್ನು ಮುಂದುವರಿಸಿಕೊಂಡು ಹೋಗುತ್ತೇವೆ ಎಂದು ದೃಢ ಸಂಕಲ್ಪ ಮಾಡುವ ದಿನವೂ ಆಗಿದೆ. ಹಾಗಾದರೆ ಮಾತ್ರ ನಮ್ಮ ಈದ್ ನಿಜವಾದ ಈದ್ ಆಗಲು ಸಾಧ್ಯ.

ಕೆಡುಕುಗಳಿಂದ ದೂರವಿರುವುದು ಮಾತ್ರ ತಖ್ವಾ ಅಲ್ಲ, ಬದಲಾಗಿ ಒಳಿತುಗಳ ಮೇಲೆ ಸ್ಥಿರವಾಗಿರುವುದು ಮತ್ತು ಅವುಗಳನ್ನು ಮುಂದುವರಿಸಿಕೊಂಡು ಹೋಗುವುದು ನಿಜವಾದ ತಖ್ವಾ ಆಗಿದೆ. ಅಲ್ಲಾಹನಿಗೆ ಮತ್ತು ಅವನ ದಾಸರಿಗೆ ಸಲ್ಲಬೇಕಾದ ಹಕ್ಕುಗಳನ್ನು ದೃಢವಾಗಿ ಮತ್ತು ಸದಾ ಪಾಲಿಸುತ್ತೇವೆ ಎಂದು ಇಂದು ನಾವು ಪುನಃ ಹೊಸದಾಗಿ ಪ್ರತಿಜ್ಞೆ ಮಾಡುತ್ತೇವೆ.

ಈದ್ ಎಂಬುದು ಕೇವಲ ತಿನ್ನುವುದು – ಕುಡಿಯುವುದು, ಆಟವಾಡುವುದು ಅಥವಾ ಹೊಸ ಬಟ್ಟೆಗಳನ್ನು ಧರಿಸುವುದರ ಹೆಸರಲ್ಲ. ಬದಲಾಗಿ, ನಾವು ಇನ್ನು ಮುಂದೆಯೂ ಒಳ್ಳೆಯ ಕೆಲಸಗಳನ್ನು ಮುಂದುವರಿಸಬೇಕು ಮತ್ತು ಕೆಡುಕುಗಳಿಂದ ದೂರವಿರಬೇಕು ಎಂದು ಯೋಚಿಸುವ ಸಂದೇಶವನ್ನು ಈದ್ ನಮಗೆ ನೀಡುತ್ತದೆ. ಒಂದು ವೇಳೆ ಇಂದು ಈದ್ ಆಚರಿಸಿದ ನಂತರ ನಾವು ರಮಝಾನಿಗಿಂತ ಹಿಂದಿನ ನಮ್ಮ ಸ್ಥಿತಿಗೆ, ಅಂದರೆ ನಮ್ಮಲ್ಲಿ ಕೆಲವರಿದ್ದ ಹಳೆಯ ಸ್ಥಿತಿಗೆ ಮರಳಿದರೆ, ಅಥವಾ ನಮ್ಮ ಹೆಜ್ಜೆಗಳು ಪ್ರಗತಿಯತ್ತ ಸಾಗದಿದ್ದರೆ, ಅದು ಒಬ್ಬ ಸತ್ಯವಿಶ್ವಾಸಿಯ ಘನತೆಗೆ ವಿರುದ್ಧವಾದ ಮಾತಾಗುತ್ತದೆ; ಒಳಿತುಗಳಲ್ಲಿ ನಿರಂತರವಾಗಿ ಮುನ್ನಡೆಯುತ್ತಲೇ ಇರುವುದೇ ಸತ್ಯವಿಶ್ವಾಸಿಯ ವಿಶೇಷತೆಯಾಗಿದೆ.

ಇಂದು ನಾವು ಸ್ವತಃ ಪರೀಕ್ಷಿಸಿಕೊಳ್ಳಬೇಕು, ಈ ಪ್ರತಿಜ್ಞೆಗೆ ಬದ್ಧರಾಗಿರಲು ನಾವು ನಮ್ಮನ್ನು ಸಿದ್ಧಪಡಿಸಿಕೊಂಡಿದ್ದೇವೆಯೇ? ಅಲ್ಲಾಹನೊಂದಿಗೆ ಮಾಡಿದ ವಾಗ್ದಾನವನ್ನು ಪೂರೈಸಲು ನಾವು ನಿಜವಾಗಿಯೂ ಪ್ರಯತ್ನಿಸುತ್ತಿದ್ದೇವೆಯೇ? ವಾಸ್ತವದಲ್ಲಿ ಒಂದು ತಿಂಗಳ ಉಪವಾಸದ ಮೂಲಕ ನಮಗೆ ಅಲ್ಲಾಹನು ಲಭಿಸಿದ್ದಾನೆ ಎಂಬ ದೃಶ್ಯವನ್ನು ಈದುಲ್ ಫಿತ್ರ್ ನಮಗೆ ತೋರಿಸುವಂತಾಗಿರಬೇಕು. ಒಂದು ವೇಳೆ ಅಲ್ಲಾಹನು ನಮಗೆ ಲಭಿಸಿರುವುದಾದರೆ ಖಂಡಿತವಾಗಿಯೂ ಒಳಿತುಗಳಲ್ಲಿ ಪ್ರಗತಿ ಕಾಣಲೇಬೇಕು.

ಈದ್‌ನ ದಿನ ಕೇವಲ ಸಂತೋಷಪಡುವ ದಿನವಲ್ಲ, ಬದಲಾಗಿ ಇದು ಆರಾಧನೆಗಳ ಕಡೆಗೆ ವಿಶೇಷ ಗಮನಹರಿಸಬೇಕಾದ ದಿನವಾಗಿದೆ. ಈ ದಿನದಲ್ಲಿ ನಮ್ಮ ಮೇಲೆ ಉಳಿದ ದಿನಗಳಿಗಿಂತ ಹೆಚ್ಚಿನ ನಮಾಝ್‌ಗಳನ್ನು ಕಡ್ಡಾಯಗೊಳಿಸಲಾಗಿದೆ. ಉಳಿದ ದಿನಗಳಲ್ಲಿ ನಮ್ಮ ಮೇಲೆ ಐದು ಹೊತ್ತಿನ ನಮಾಝ್ ಕಡ್ಡಾಯವಾಗಿರುತ್ತದೆ. ಆದರೆ ಈದ್‌ನ ದಿನ ನಮ್ಮ ಮೇಲೆ ಆರು ನಮಾಝ್‌ಗಳು ಕಡ್ಡಾಯವಾಗುತ್ತವೆ. ಆದ್ದರಿಂದ ಇದು ಆರಾಧನೆಗಳಿಗಾಗಿ ಇರುವ ಒಂದು ವಿಶೇಷ ದಿನವಾಗಿದೆ. ಈ ಮಾತನ್ನು ನಾವು ನೆನಪಿನಲ್ಲಿಡಬೇಕು.

ಒಂದು ವೇಳೆ ನಮಗೆ ಅಲ್ಲಾಹನು ಲಭ್ಯವಾಗದಿದ್ದರೆ, ಅವನ ಆರಾಧನೆಯ ಹಕ್ಕನ್ನು ಪೂರೈಸಲು ನಮಗೆ ಸಾಧ್ಯವಾಗದಿದ್ದರೆ, ಅವನ ದಾಸರ ಹಕ್ಕುಗಳನ್ನು ಪೂರೈಸಲಾಗದಿದ್ದರೆ, ಅಲ್ಲಾಹನನ್ನು ಪಡೆಯಲು ಮಾಡಬೇಕಾದ ಕರ್ತವ್ಯವನ್ನು ಪೂರೈಸದಿದ್ದರೆ, ಕೇವಲ ಸಂತೋಷಪಡುವುದು ಈದ್‌ನ ಉದ್ದೇಶವಲ್ಲ. ಸಹಜೀವಿಗಳ ಹಕ್ಕುಗಳನ್ನು ಪೂರೈಸುವುದು ಸಹ ಅತ್ಯಗತ್ಯವಾಗಿದೆ, ಅದು ಕೂಡ ಒಂದು ರೀತಿಯ ಆರಾಧನೆಯೇ ಆಗಿದೆ. ಯಾವನಿಗೆ ಅಲ್ಲಾಹನು

ಲಭ್ಯವಾಗಿಲ್ಲವೋ ಅಂತಹ ವ್ಯಕ್ತಿಯನ್ನು ಹಝ್ರತ್ ಮುಸ್ಲಿಹ್ ಮೌಊದ್[ರ] ವಜ್ರ – ವೈಡೂರ್ಯಗಳ ಪರಿಚಯವಿಲ್ಲದ ಮತ್ತು ಗಾಜಿನ ಚೂರನ್ನೇ ವಜ್ರವೆಂದು ಭಾವಿಸುವ ಹುಚ್ಚನಿಗೆ ಹೋಲಿಸಿದ್ದಾರೆ. ಮನುಷ್ಯನಿಗೆ ದೇವನೊಂದಿಗೆ ವಿಶೇಷ ಸಂಬಂಧ ಏರ್ಪಡುವಾಗ ಮಾತ್ರ ಅವನಿಗೆ ದೇವನನ್ನು ಗುರುತಿಸಲು ಸಾಧ್ಯವಾಗುತ್ತದೆ. ಅಲ್ಲಾಹನು ಯಾರನ್ನು ಇಷ್ಟಪಡುತ್ತಾನೋ, ಅವರಿಗೆ ತನ್ನ ಪರಿಚಯ ಮತ್ತು ಅರಿವನ್ನು ಕರುಣಿಸುತ್ತಾನೆ. ಅಲ್ಲಾಹನನ್ನು ಪಡೆದುಕೊಳ್ಳುವುದೇ ಒಬ್ಬ ನೈಜ ಸತ್ಯವಿಶ್ವಾಸಿಯ ಸಂತೋಷವಾಗಿದೆ.

ಹಝ್ರತ್ ಪೈಗಂಬರ್[ಸ] ಹೇಳಿದರು: ಕಳೆದುಹೋದ ತನ್ನ ಮಗು ಸಿಗುವಾಗ ತಾಯಿಯೊಬ್ಬಳಿಗೆ ಆಗುವ ಸಂತೋಷಕ್ಕಿಂತಲೂ ಹೆಚ್ಚಾಗಿ ತನ್ನ ದಾಸನು ತನ್ನ ಕಡೆಗೆ ಹಿಂತಿರುಗುವಾಗ ಅಲ್ಲಾಹನಿಗೆ ಸಂತೋಷವಾಗುತ್ತದೆ.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಈದ್‌ನ ದಿನವು ನಿಸ್ಸಂದೇಹವಾಗಿ ಶುಭ ದಿನವಾಗಿದೆ. ಆದರೆ ಇದಕ್ಕಿಂತಲೂ ಶುಭಕರವಾದ ಇನ್ನೊಂದು ದಿನವಿದೆ. ಆ ದಿನವು ಮನುಷ್ಯನ ಪಶ್ಚಾತ್ತಾಪದ (ತೌಬದ) ದಿನವಾಗಿದೆ. ಆ ದಿನವು ಜುಮುಅ ಮತ್ತು ಈದ್‌ನ ದಿನಕ್ಕಿಂತಲೂ ಹೆಚ್ಚು ಸಂತೋಷದ ದಿನವಾಗಿದೆ. ನಿಜವಾದ ಪಶ್ಚಾತ್ತಾಪದ ಜೊತೆಗೆ ನಿಜವಾದ ಪರಿಶುದ್ಧತೆ ಮತ್ತು ಪಾವಿತ್ರ್ಯತೆ ಶರತ್ತಾಗಿದೆ. ಎಲ್ಲ ರೀತಿಯ ಮಲಿನತೆ ಮತ್ತು ಕೊಳಕಿನಿಂದ ದೂರವಿರಬೇಕು ಎಂಬುದು ತೌಬದ ಶರತ್ತಾಗಿದೆ, ಇಲ್ಲದಿದ್ದರೆ ಕೇವಲ ತೌಬಾ ಮತ್ತು ಇತರ ಪದಗಳನ್ನು ಪದೇ ಪದೇ ಹೇಳುವುದರಿಂದ ಯಾವುದೇ ಪ್ರಯೋಜನವಿಲ್ಲ. ಮನುಷ್ಯನು ತನ್ನ ದುಷ್ಕೃತ್ಯಗಳಿಂದ ಪಶ್ಚಾತ್ತಾಪಪಟ್ಟು ಅಲ್ಲಾಹನೊಂದಿಗೆ ಒಪ್ಪಂದದ ನಿಜವಾದ ಕರಾರನ್ನು ಮಾಡಿಕೊಳ್ಳುವ ಮತ್ತು ಅವನ ಆಜ್ಞೆಗಳ ಮುಂದೆ ತಲೆಬಾಗುವ ದಿನವು ಅತ್ಯಂತ ಶುಭ ದಿನವಾಗಿದೆ. ಹೀಗೆ ತನ್ನ ದುಷ್ಕೃತ್ಯಗಳ ಪ್ರತಿಫಲವಾಗಿ ಗುಪ್ತವಾಗಿ ಸಿದ್ಧವಾಗುತ್ತಿದ್ದ ಶಿಕ್ಷೆಯಿಂದ ಮನುಷ್ಯನು ರಕ್ಷಿಸಲ್ಪಡುತ್ತಾನೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಈ ಮೂಲಕ ಆ ಮನುಷ್ಯನು ತಾನು ಊಹಿಸಿಯೇ ಇಲ್ಲದಂತಹ ಅನುಗ್ರಹವನ್ನು ಪಡೆದುಕೊಳ್ಳುತ್ತಾನೆ.

ಇಂದು ಲೋಕದಲ್ಲಿ ಬಹಳಷ್ಟು ಕೆಡುಕುಗಳಿವೆ. ಆದರೆ ಈ ದಿನಗಳಲ್ಲಿ ಒಬ್ಬ ಸತ್ಯವಿಶ್ವಾಸಿ ಅಲ್ಲಾಹನಿಗಾಗಿ ಉಪವಾಸಗಳನ್ನು ಇರಿಸುವಾಗ ಮತ್ತು ಅವನ ಸಾಮೀಪ್ಯವನ್ನು ಪಡೆಯಲು ಪ್ರಯತ್ನಿಸುವಾಗ, ಅಲ್ಲಾಹನು ಅದಕ್ಕೆ ಅಪಾರ ಪ್ರತಿಫಲವನ್ನು ನೀಡುತ್ತಾನೆ. ನಾವು ಈ ಸಂಗತಿಗಳನ್ನು ಪಾಲಿಸಲು ಪ್ರಯತ್ನಿಸುವಾಗ, ನಾವು ಮತ್ತು ನಮ್ಮ ಕುಟುಂಬವು ಈದ್‌ನ ಮೂಲ ಉದ್ದೇಶವಾದ ಆ ನೈಜ ಈದ್‌ನ ಸಂತೋಷಗಳನ್ನು ಪಡೆಯುವವರಾಗುತ್ತೇವೆ.

ರಮಝಾನಿನಲ್ಲಿ ನಾವು ಅಳವಡಿಸಿಕೊಳ್ಳಲು ಪ್ರಯತ್ನಿಸಿದ ಆ ಒಳಿತುಗಳನ್ನು ಈಗ ನಾವು ಮುಂದುವರಿಸಿಕೊಳ್ಳುವವರಾಗುವಂತೆ ಅಲ್ಲಾಹನು ಮಾಡಲಿ. ರಮಝಾನ್‌ನಲ್ಲಿ ತರಾವೀಹ್ ಅಥವಾ ತಹಜ್ಜುದ್‌ಗಾಗಿ ಮಸೀದಿಗಳಿಗೆ ಬರುತ್ತಿದ್ದರೆ, ಈಗ ಮನೆಗಳಲ್ಲಿ ಸ್ವಲ್ಪಮಟ್ಟಿಗಾದರೂ ನಫಲ್ ನಮಾಝ್‌ಗಳನ್ನು ಅನುಷ್ಠಿಸುವವರಾಗಬೇಕು. ಅಲ್ಲಾಹನು ಈ ಪವಿತ್ರ ಬದಲಾವಣೆಯನ್ನು ನಮ್ಮೊಳಗೆ ನಿರಂತರವಾಗಿ ಉಂಟುಮಾಡುತ್ತಿರಲಿ. ನಾವು ದಾಸರ ಹಕ್ಕುಗಳನ್ನು ಮತ್ತು ಪರಸ್ಪರರ ಹಕ್ಕುಗಳನ್ನು ಪೂರೈಸುವವರಾಗುವಂತೆ ಅಲ್ಲಾಹನು ಮಾಡಲಿ.

(ಹುಝೂರ್ ದುಆ ಮಾಡಲು ಮನವಿ ಮಾಡುತ್ತಾ ಹೀಗೆ ಹೇಳಿದರು:) ಅಲ್ಲಾಹನು ಎಲ್ಲ ಅಹ್ಮದಿಯರನ್ನು ತನ್ನ ಕರುಣೆಯ ಚಾದರದಲ್ಲಿ ಹೊದಿಸಲಿ ಎಂದು ದುಆ ಮಾಡುತ್ತಿರಿ. ಅನೇಕ ಸ್ಥಳಗಳಲ್ಲಿ ಬಹಳಷ್ಟು ಅಹ್ಮದಿಯರು ವಿನಾಕಾರಣ ಕಾನೂನಿನ ಹಿಡಿತದಲ್ಲಿದ್ದಾರೆ. ಉದಾಹರಣೆಗೆ, ಪಾಕಿಸ್ತಾನದಲ್ಲಿ ಧಾರ್ಮಿಕ ಸ್ವಾತಂತ್ರ್ಯದೊಂದಿಗೆ ಈದ್ ನಮಾಝನ್ನು ಕೂಡ ಅಹ್ಮದಿಯರಿಗೆ ಅನುಷ್ಠಿಸಲು ಆಗುತ್ತಿಲ್ಲ. ನಿಜವಾದ ಈದ್ ಹಬ್ಬವನ್ನು ಆಚರಿಸುವಂತಾಗಲು, ಸ್ವತಃ ಅಲ್ಲಾಹನ ಸಾಮೀಪ್ಯ ಪಡೆಯುವವರಾಗಲು ಮತ್ತು ಈದ್‌ನ ಬಾಹ್ಯ ಸಂತೋಷಗಳನ್ನು ಆಚರಿಸುವಂತಾಗಲು ಅಲ್ಲಾಹನು ಅವರಿಗೆ ಸೌಭಾಗ್ಯವನ್ನು ದಯಪಾಲಿಸಲಿ. ಅಲ್ಲಾಹನು ಅವರ ಕಷ್ಟಗಳನ್ನು ಬೇಗನೇ ದೂರ ಮಾಡಲಿ.

ಇಂದು ಕೂಡ ಅವರು ಅತ್ಯಂತ ಭಯದ ವಾತಾವರಣದಲ್ಲಿ ಈದ್ ನಮಾಝ್ ನಿರ್ವಹಿಸಿದ್ದಾರೆ, ಸಮಯವನ್ನು ಬದಲಾಯಿಸುತ್ತಾ ಮತ್ತು ಸ್ಥಳಗಳನ್ನು ಬದಲಾಯಿಸುತ್ತಾ ನಮಾಝ್ ನಿರ್ವಹಿಸಿದ್ದಾರೆ. ಕರಾಚಿಯಲ್ಲಿ ಮತ್ತು ಇತರ ಕೆಲವು ಸ್ಥಳಗಳಲ್ಲಿ ನಮಾಝ್ ನಿರ್ವಹಿಸುವುದನ್ನು ತಡೆಯಲಾಯಿತು. ಮಸೀದಿಗಳ ಮೇಲೆ ವಿರೋಧಿಗಳು ದಾಳಿಯನ್ನು ಕೂಡ ಮಾಡಿದರು. ಅಧಿಕಾರಿಗಳ ಸ್ಥಿತಿ ಹೇಗಿದೆಯೆಂದರೆ, ದಾಳಿಕೋರರನ್ನು ತಡೆಯುವ ಬದಲು, ಅವರು ನಮ್ಮ ಮಸೀದಿಗಳಿಗೆ ಬೀಗ ಜಡಿದರು. ಅಲ್ಲಾಹನು ಶೀಘ್ರವಾಗಿ ಈ ವಿರೋಧಿಗಳನ್ನು ಹಿಡಿಗೂಡಲಿ. ಆಮೀನ್.

ರೋಗಿಗಳಿಗಾಗಿಯೂ ದುಆ ಮಾಡಿರಿ, ಅಲ್ಲಾಹನು ಎಲ್ಲ ರೋಗಿಗಳಿಗೂ ಆರೋಗ್ಯವನ್ನು ಕರುಣಿಸಲಿ. ಮಾನವೀಯತೆ, ಇಸ್ಲಾಂ ಮತ್ತು ಜಮಾಅತ್‌ಗಾಗಿ ಆರ್ಥಿಕ ಹಾಗೂ ಎಲ್ಲ ರೀತಿಯ ತ್ಯಾಗಗಳನ್ನು ಮಾಡುವವರ ಮೇಲೂ ಅಲ್ಲಾಹನು ತನ್ನ ಅನುಗ್ರಹವನ್ನು ಸುರಿಸಲಿ. ಆಮೀನ್.

ಹುತಾತ್ಮರ ಮಕ್ಕಳಿಗಾಗಿ, ಅಲ್ಲಾಹನ ಮಾರ್ಗದಲ್ಲಿ ಸೆರೆಯಾಗಿರುವವರಿಗಾಗಿ, ವಖ್ಫೇ ಝಿಂದಗಿಗಳಿಗಾಗಿ ಮತ್ತು ಒಟ್ಟಾರೆಯಾಗಿ ಮುಸ್ಲಿಂ ಸಮುದಾಯಕ್ಕಾಗಿ ದುಆ ಮಾಡಿರಿ. ಅಲ್ಲಾಹನು ಮುಸ್ಲಿಮರಿಗೆ ಬುದ್ಧಿ ಮತ್ತು ವಿವೇಕವನ್ನು ನೀಡಲಿ,

ಈ ಜನರು ನಿಜವಾದ ಅರ್ಥದಲ್ಲಿ ಅಲ್ಲಾಹನ ಸೆರಗನ್ನು ಹಿಡಿಯುವವರಾಗಲಿ. ಈ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್[ಅ]ರನ್ನು ಸ್ವೀಕಾರ ಮಾಡಿಕೊಂಡು, ಈ ಜನರು ಅಲ್ಲಾಹನ ಸಂಪ್ರೀತಿಯನ್ನು ಪಡೆಯುವವರಾಗಲಿ ಮತ್ತು ನಿಜವಾದ ಈದ್ ಹಬ್ಬವನ್ನು ಆಚರಿಸುವಂತಾಗಲಿ.

(ಖುತ್ಬ ಸಾನಿಯದ ಕೊನೆಯಲ್ಲಿ ಹುಝೂರ್ ಲೋಕದಾದ್ಯಂತ ಇರುವ ಅಹ್ಮದಿಯಾ ಜಮಾಅತಿನ ಎಲ್ಲ ಸದಸ್ಯರಿಗೆ ಈದ್ ಮುಬಾರಕಿನ ಶುಭಾಶಯವನ್ನು ಕೋರಿದರು. ಅನಂತರ ಹುಝೂರ್ ಹೇಳಿದರು:) ಪಾಕಿಸ್ತಾನದ ಜನರನ್ನು ಸದಾ ಪ್ರಾರ್ಥನೆಗಳಲ್ಲಿ ನೆನಪಿಡಿ ಎಂದು ನಾನು ಹೇಳಿದ್ದೆ. ಸಾಕಷ್ಟು ಕಷ್ಟಕರವಾದ ಪರಿಸ್ಥಿತಿಗಳಿವೆ. ಅಲ್ಲಾಹನು ನಿಜವಾದ ಅರ್ಥದಲ್ಲಿ ಅವರಿಗೆ ಈದನ್ನು ಶುಭಕರವಾಗಿಸಲಿ. ಅವರೆಲ್ಲರಿಗೂ ಈದ್ ಮುಬಾರಕ್. ಅವರು ಮನೆಗಳಲ್ಲಿ ಕುಳಿತಿದ್ದಾರೆ. ಮೇಲ್ನೋಟಕ್ಕೆ ಇದು ನಿರಾಶೆಯ ಸ್ಥಿತಿಯಾಗಿದೆ. ಆದರೆ ಅವರು ಚಿಂತಿಸಬಾರದು. ಅಲ್ಲಾಹನು ಬೇಗನೇ ಪರಿಸ್ಥಿತಿಯನ್ನು ಬದಲಾಯಿಸುವನು. ಇನ್‌ಶಾ ಅಲ್ಲಾಹ್.

*****

اَلْحَمْدُ لِلّٰهِ نَحمَدُهُ وَ نَسْتَعِيْنُهُ وَ نَسْتَغْفِرُهُ وَنُوْمِنُ بِهِ وَنَتَوَكَّلُ
عَلَيْهِ وَنَعُوْذُ بِاللّٰهِ مِنْ شُرُوْرِ اَنْفُسِنَا وَ مِنْ سَيِّئَاتِ اَعْمَالِنَا مَنْ
يَّهْدِهِ اللّٰهُ فَلَا مُضِلَّ لَهُ وَمَنْ يُضْلِلْهُ فَلَا هَادِيَ لَهُ - وَنَشْهَدُ اَنْ لَّا
اِلٰهَ اِلَّا اللّٰهُ وَ نَشْهَدُ اَنَّ مُحَمَّدًا عَبْدُهُ وَرَسُوْلُهُ- عِبَادَ اللّٰهِ رَحِمَكُمُ
اللّٰهُ اِنَّ اللّٰهَ يَاْمُرُ بِالْعَدْلِ وَ الْاِحْسَانِ وَ اِيْتَاءِ ذِي الْقُرْبٰى وَ يَنْهٰى
عَنِ الْفَحْشَاءِ وَ الْمُنْكَرِ وَ الْبَغْيِ يَعِظُكُمْ لَعَلَّكُمْ تَذَكَّرُوْنَ
اُذْكُرُوْا اللّٰهَ يَذْكُرْكُمْ وَ ادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ-


***Eid Khutba Sermon delivered by Hadrath Khaleefatul Masih Al Khamis[atba]***

*At, **'Masjid Mubarak',** Islamabad, Tilford, UK. On 31-03-2025*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* Basheer K.P. Manjeshwar

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon